**ಸಾಕ್ಷಿಯನ್ನು ದಿಃ 21.01.2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

1. ನಿಪಿ -2 ರ ಪಹಣಿಯಲ್ಲಿರುವ ಸರ್ವೆ ನಂಬರ್ ನಲ್ಲಿ ಒಟ್ಟು 34 ಗುಂಟೆ ಇದೆ.

2. ಸ.ನಂ.76/2 ಎ2 ರಲ್ಲಿ ಒಟ್ಟು 1 ಎಕರೆ 12 ಗುಂಟೆ ಜಮೀನು ಇದೆ ಎಂದರೆ ಸರಿಯಲ್ಲ.

3. ಪೂರ್ವಕ್ಕೆ ಹಾಗೂ ಪಶ್ಚಿಮಕ್ಕೆಃ ಗಂಗಮ್ಮನ ಜಮೀನು, ಉತ್ತರಕ್ಕೆಃ ಕಾಳಮ್ಮನ ಜಮೀನು, ದಕ್ಷಿಣಕ್ಕೆ ರುದ್ರೇಗೌಡ ಜಮೀನು, ಸದರಿ ಜಮೀನಿನಲ್ಲಿ ನಿಮಗೆ ಹಕ್ಕು ಮತ್ತು ಸ್ವಾಧೀನ ಇದೆಯಾ ಎಂದರೆ, ಇದೆ ಎಂದು ನುಡಿಯುತ್ತಾರೆ.

4. ಮೇಲೆ ಹೇಳಿದ ಚಕ್ಕುಬಂದಿಯಲ್ಲಿ ನಾವು ನಕ್ಷೆಯನ್ನು ಮಾಡಿಸಿರುವುದಿಲ್ಲ.

5. ತಾಲೂಕು ಪಂಚಾಯ ಸಮೀತಿ, ಕಾರ್ಯದರ್ಶಿ ಪಿರಿಯಾಪಟ್ಟಣ ಇವರು ವಶಪಡಿಸಿಕೊಂಡಿರುವ 12 ಗುಂಟೆ ಜಮೀನು ಇದೆ ಎಂದರೆ ಸರಿ. ಸದರಿ ಜಮೀನು ನೀವು ಬರೆಸಿಕೊಂಡಿರುವ ಕರಾರು ಪತ್ರದ ಜಮೀನು ಯಾವ ದಿಕ್ಕಿಗೆ ಇದೆ ಎಂದರೆ, ಪೂರ್ವಕ್ಕೆ ಬರುತ್ತದೆ.

6. ನೀವು ಹಾಜರುಪಡಿಸಿರುವ ನಿಪಿ - 1 ರ ಪತ್ರದಲ್ಲಿ ಯಾವ ದಿಕ್ಕಿಗಾದರೂ ಸರ್ಕಾರ ವಶಪಡಿಸಿಕೊಂಡ ಜಮೀನಿನ ಬಗ್ಗೆ ನಮೂದು ಮಾಡಲು ತೊಂದರೆ ಇತ್ತಾ ಎಂದರೆ, ತೊಂದರೆ ಇರಲಿಲ್ಲ, ಆದರೆ ಆಗ ಪಹಣಿಯಲ್ಲಿ ನಮೂದು ಇರಲಿಲ್ಲ ಎಂದು ನುಡಿಯುತ್ತಾರೆ.

7. 2016-17 ರಲ್ಲಿ ಸ.ನಂ.76/2 ಎ2 ರ ಪಹಣಿಯನ್ನು ನೀವು ನೋಡಿದ್ದೀರಾ ಎಂದರೆ, ನೋಡಿದ್ದೇನೆ.

8. 4 ನೇ ಪ್ರತಿವಾದಿಯ ನಿಜವಾದ ಹೆಸರನ್ನು ತಿಳಿದುಕೊಳ್ಳಲು ಪ್ರಯತ್ನಿಪಟ್ಟಿದ್ದೀರಾ ಎಂದರೆ, ಮಂಜು ಹಾಗೂ ಮಂಜೇಗೌಡ ಎರಡೂ ಹೆಸರಿನಿಂದ ಕರೆಯುತ್ತಾರೆ.

9. ವಾದ ಪತ್ರ ಹಾಗೂ ಪ್ರಮಾಣ ಪತ್ರದಲ್ಲಿ ಎರಡೂ ಹೆಸರುಗಳನ್ನು ನಮೂದು ಮಾಡಿಲ್ಲ.

10. 4 ನೇ ಪ್ರತಿವಾದಿಯ ತಾತ ಸಣ್ಣ ನಿಂಗೇಗೌಡರ ಹೆಸರಿನಲ್ಲಿ 1975-76 ರಲ್ಲಿ ಪಹಣಿ ಇತ್ತು ಎಂದರೆ, ನನಗೆ ಗೊತ್ತಿಲ್ಲ.

11. ನಾವು ಕ್ರಯದ ಕರಾರು ಮಾಡಿಕೊಂಡ ಸಮಯದಲ್ಲಿ ಪಹಣಿ ಹಾಗೂ ನಕಾಶೆ ನೋಡಿ ಮಾಡಿಕೊಂಡಿರುತ್ತೇವೆ.

12. 1 ನೇ ಪ್ರತಿವಾದಿ ಪುಟ್ಟಗೌರಮ್ಮ ನವರು ಇದೇ ನ್ಯಾಯಾಲಯದಲ್ಲಿ ಅ.ದಾ.ನಂ.309/2019 ರಲ್ಲಿ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ವಿಭಾಗ ಕೋರಿ ದಾವೆ ಹಾಕಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆ ಈಗಲೂ ವಿಚಾರಣೆ ಹಂತದಲ್ಲಿದೆ ಎಂದರೆ ನನಗೆ ಗೊತ್ತಿಲ್ಲ.

13. ಕ್ರಯ ಕರಾರು ಪತ್ರದಲ್ಲಿ 4 ನೇ ಪ್ರತಿವಾದಿ ಸಹಿ ಮಾಡಿರುವುದಿಲ್ಲ. ಸದರಿ ಪತ್ರದಲ್ಲಿ 4 ನೇ ಪ್ರತಿವಾದಿಯನ್ನು ಸಾಕ್ಷಿದಾರರಾಗಿ ಮಾಡಲು ತೊಂದರೆ ಇತ್ತಾ ಎಂದರೆ, ಅವರ ಅವಶ್ಯಕತೆ ಇರಲಿಲ್ಲ ಎಂದು ನುಡಿಯುತ್ತಾರೆ. ಆದರೆ ಅವರ ತಾಯಿ ಪದ್ಮಮ್ಮ ನವರು ಸಹಿ ಮಾಡಿರುತ್ತಾರೆ.

14. ಸಣ್ಣ ನಿಂಗೇಗೌಡರ ಮಕ್ಕಳು ಪದ್ಮಮ್ಮ ಮತ್ತು ಪುಟ್ಟಗೌರಮ್ಮ. ಸದರಿಯವರ ನಡುವೆ ವಿಭಾಗವಾದ ಬಗ್ಗೆ ನನಗೆ ಮಾಹಿತಿ ಇಲ್ಲ. ಅವರ ನಡುವೆ ಯಾವುದೇ ವಿಭಾಗವಾಗಿಲ್ಲ, ಈಗಲೂ ಒಟ್ಟು ಕುಟುಂಬದಲ್ಲಿ ಆಸ್ತಿ ಇವೆ ಎಂದರೆ, ನನಗೆ ಗೊತ್ತಿಲ್ಲ. ಆದರೆ ಮೂರೂ ಜನ ಸೇರಿ ಬರೆದುಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

15. ಸಣ್ಣ ನಿಂಗೇಗೌಡರ ಜೀವಿತಾವಧಿಯಲ್ಲಿ ಅವರು ಹಾಗೂ ಅವರ ಮಕ್ಕಳು ದಾವಾ ಸ್ವತ್ತಿನಲ್ಲಿ ವ್ಯವಸಾಯ ಮಾಡುತ್ತಿದ್ದರು ಎಂದರೆ, ನನಗೆ ಗೊತ್ತಿಲ್ಲ.

16. ಅವರು ಮೃತರಾದ ನಂತರ ಅವರ ಮಕ್ಕಳು ಹಾಗೂ ಮೊಮ್ಮಕ್ಕಳು ದಾವಾ ಸ್ವತ್ತಿನಲ್ಲಿ ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿ.

17. 2018 ರಲ್ಲಿ 4 ನೇ ಪ್ರತಿವಾದಿಗೆ 25 ವರ್ಷ ಆಗಿತ್ತು ಎಂದರೆ, ನನಗೆ ಗೊತ್ತಿಲ್ಲ.

18. 4 ನೇ ಪ್ರತಿವಾದಿಯನ್ನು ಹಾಗೂ ಅವರ ಸಹೋದರರಾದ 2 ರಿಂದ 5 ರವರನ್ನು ನಿಪಿ-1 ರ ಪತ್ರದಲ್ಲಿ ಒಳಪಡಿಸಿಲ್ಲ ಹಾಗೂ ಅವರ ಸಹಿ ಪಡೆದುಕೊಂಡಿಲ್ಲ ಎಂದರೆ, ಕಾಳಮ್ಮನ ಸ್ವಯಾರ್ಜಿತ ಆಸ್ತಿ ಆಗಿದ್ದರಿಂದ ಅವಶ್ಯಕತೆ ಇರಲಿಲ್ಲ ಎಂದು ನುಡಿಯುತ್ತಾರೆ.

19. ಸ.ನಂ.76/2 ಎ 2 ರಲ್ಲಿ ಎಷ್ಟು ಪೋಡು ಆಗಿದೆ ಎಂದು ನನಗೆ ಮಾಹಿತಿ ಇಲ್ಲ.

20. 20 ಗುಂಟೆಗೆ ಸಂಬಂಧಪಟ್ಟಂತೆ ನಾವು ಅಳತೆ ಮಾಡಿಸಿ ಕಚ್ಚಾ ನಕಾಶೆ ಮಾಡಿಸಿಲ್ಲ.

21. ಸ.ನಂ.76/2 ಎ 2 ರಲ್ಲಿ 34 ಗುಂಟೆಗೆ ಸಂಬಂಧಪಟ್ಟಂತೆ ಚಕ್ಕುಬಂದಿ ನನಗೆ ಗೊತ್ತು. ಪೂರ್ವಕ್ಕೆಃ ಗಂಗಮ್ಮನ ಜಮೀನು, ಪಶ್ಚಿಮಕ್ಕೆಃ ಕಾಲುವೆ, ಉತ್ತರಕ್ಕೆಃ ಗೋವಿಂದೇಗೌಡರು ಹಾಗೂ ರಾಜಮ್ಮನವರ ಜಮೀನು, ದಕ್ಷಿಣಕ್ಕೆಃ ಗೋವಿಂದೇಗೌಡರು ರವರ ಜಮೀನು ಇದೆ.

22. ಸ.ನಂ.76/2 ಎ 2 ರಲ್ಲಿ 20 ಗುಂಟೆಗೆ ಚಕ್ಕುಬಂದಿ ಗೊತ್ತು. ಪೂರ್ವಕ್ಕೆಃ ಗಂಗಮ್ಮನ ಜಮೀನು, ಪಶ್ಚಿಮಕ್ಕೆಃ ಕಾಳಮ್ಮನವರ 14 ಗುಂಟೆ ಜಮೀನು, ಉತ್ತರಕ್ಕೆಃ ರುದ್ರೇಗೌಡ ಹಾಗೂ ರಾಜಮ್ಮನವರ ಜಮೀನು, ದಕ್ಷಿಣಕ್ಕೆಃ ಗೋವಿಂದೇಗೌಡ ರವರ ಜಮೀನು ಇದೆ.

23. ಮೇಲೆ ಹೇಳಿದ ಚಕ್ಕುಬಂದಿ ಹಾಗೂ ಕ್ರಯಪತ್ರ ಬರೆಸಿದ್ದೀರಾ ಎಂದರೆ, ಸರಿ.

24. ಸದರಿ ಚಕ್ಕುಬಂದಿಯನ್ನು ನೀವೇ ಸೃಷ್ಠಿ ಮಾಡಿದ್ದೀರಾ ಎಂದರೆ ಸರಿಯಲ್ಲ. ಸದರಿ ಚಕ್ಕುಬಂದಿ ತೋರಿಸಲು ದಾಖಲೆ ಹಾಜರುಪಡಿಸಿಲ್ಲ.

25. 1 ನೇ ಪ್ರತಿವಾಯನ್ನು ಷರೀಕ್ ಮಾಡಿಕೊಂಡು, 4 ನೇ ಪ್ರತಿವಾದಿಗೆ ತೊಂದರೆಯಾಗಲಿ ಎಂದು ಸುಳ್ಳು ದಾವೆ ಹಾಕಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

26.  4 ನೇ ಪ್ರತಿವಾದಿ ಹಾಗೂ ಅವರ ಸಹೋದರರ ಹಕ್ಕನ್ನು ಮೊಟಕುಗೊಳಿಸಲು ಸುಳ್ಳು ದಾವೆ ಹಾಕಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.) ಓ ಹೇ ಕೇ ಸ ಇ ಒ

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಪಿರಿಯಾಪಟ್ಟಣ